## ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ

## ಸಿ. ಸಿ. ನಂಃ 193/2020

ಪಿ.ಡಬ್ಲ್ಯೂ- 1
ಸಿ.ಡಬ್ಲೂ- 1

ಹೆಸರು ಃ- ರಾಘವೇಂದ್ರ ಅಬ್ಬಿಗೇರಿ

ತಂದೆ / ಗಂಡನ ಹೆಸರು ಃ- ಶಿವಪ್ಪ

ವಯಾ ಃ- 36 ವರ್ಷ

ಉದ್ಯೋಗ ಃ- ಒಕ್ಕಲುತನ

ವಾಸಸ್ಥಳ ಃ- ಅಣ್ಣಿಗೇರಿ

ಸತ್ಯ ಪ್ರತಿಜ್ಞೆ ಮೇರೆಗೆ ಃ- ದಿನಾಂಕಃ 18-03-2025

*ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ*

1) ಆರೋಪಿತನ ಪರಿಚಯವಿಲ್ಲ. ಚಾಸಾ-12 ನನ್ನ ತಮ್ಮನಾಗಬೇಕು. ಚಾಸಾ-14 ನನ್ನ ಅಣ್ಣನಾಗಬೇಕು. ಚಾಸಾ-15 ರವರ ಪರಿಚಯವಿದೆ.

2) ಪ್ರಕರಣದಲ್ಲಿ ಮರಣ ಹೊಂದಿದ ದುರ್ಗಪ್ಪ ಶಿವಪ್ಪ ಅಬ್ಬಿಗೇರಿ, ಶಿವಾನಂದ ಕಾಳೆ ಹಾಗೂ ಅಶೋಕ ಕಾಳೆರವರಲ್ಲಿ ದುರ್ಗಪ್ಪನು ನನ್ನ ತಮ್ಮನಾಗಬೇಕು. ದಿನಾಂಕ 14-01-2020 ರಂದು ನನ್ನ ತಮ್ಮನ ದ್ವಿಚಕ್ರ ವಾಹನ ಸಂಖ್ಯೆ ಕೆಎ 63 8798 ನೇದ್ದರ ಮೇಲೆ ಹುಲಕೋಟೆಯಿಂದ ಅಣ್ಣಿಗೇರಿಗೆ ಬರುತ್ತಿರುವ ಸಮಯದಲ್ಲಿ ಅಣ್ಣಿಗೇರಿಯಿಂದ ಗದಗ ಕಡೆಗೆ ಆರೋಪಿತನು ಚಲಾಯಿಸುತ್ತಿದ್ದ ಕೆ.ಎಸ್.ಆರ್.ಟಿ.ಸಿ. ಬಸ್ಸ ಸಂಖ್ಯೆ ಕೆಎ 26 ಎಫ್ 877 ನೇದ್ದರನ್ನು ರಸ್ತೆಯ ಬಲಬದಿಗೆ ಚಲಾಯಿಸಿಕೊಂಡು ಎದುರುಗಡೆಯಿಂದ ಬರುತ್ತಿದ್ದ ನನ್ನ ತಮ್ಮನ ದ್ವಿಚಕ್ರ ವಾಹನಕ್ಕೆ ಗುದ್ದಿ ರಸ್ತೆ ಅಪಘಾತ ಪಡಿಸಿ ಸದರಿಯವರು ಸ್ಥಳದಲ್ಲಿ ಮರಣ ಪಟ್ಟಿರುತ್ತಾರೆ.

3) ನನಗೆ ಪ್ರತ್ಯಕ್ಷ ಕಂಡವರು ದೂರವಾಣಿ ಸಂಖ್ಯೆ ಮೂಲಕ ಮಾಹಿತಿಯನ್ನು ತಿಳಿಸಿರುತ್ತಾರೆ. ಆಗ ನಾನು ಮನೆಯಲ್ಲಿ ಇದ್ದು ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಘಟನಾ ಸ್ಥಳದಲ್ಲಿ ಇಬ್ಬರು ಮೃತ ಪಟ್ಟಿದ್ದು ಅಶೋಕ ಇತನಿಗೆ ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

4) ನಂತರ ಠಾಣೆಗೆ ಹಾಜರಾಗಿ ಪ್ರಥಮ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಪ್ರಥಮ ಮಾಹಿತಿಯನ್ನು ನಿ.ಪಿ.**1** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಮತ್ತು ನಿ.ಪಿ.1(ಬಿ) ಎಂದು ಗುರುತಿಸಲಾಯಿತು.

5) ನಂತರ ಅದೇ ದಿನ ಅಣ್ಣಿಗೇರಿಯ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ನನ್ನ ತಮ್ಮನ ಶವಪಂಚನಾಮೆಗೆ ಹಾಜರಾಗಿ ಅಲ್ಲಿ ಶವಪಂಚನಾಮೆಯನ್ನು ಮಾಡಿ ಅಲ್ಲಿ 2 ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ನಿ.ಪಿ.**2** ಎಂದು ಗುರುತಿಸಲಾಯಿತು. ಛಾಯಾಚಿತ್ರಗಳನ್ನು ಕ್ರಮವಾಗಿ ನಿ.ಪಿ.**3** ಮತ್ತು ನಿ.ಪಿ.**4** ಎಂದು ಗುರುತಿಸಲಾಯಿತು. ಮೃತ ದೇಹವನ್ನು ಪಡೆದುಕೊಂಡ ಬಗ್ಗೆ ಹಿಂಬರಹವನ್ನು ನೀಡಿರುತ್ತೇನೆ. ಸದರಿ ಹಿಂಬರಹವನ್ನು ನಿ.ಪಿ.**5** ಎಂದು ಗುರುತಿಸಲಾಯಿತು.

6) ನಂತರ ಮಾರನೇ ದಿನ ಅಂದರೆ ದಿನಾಂಕ 15-01-2020 ರಂದು ಘಟನಾ ಸ್ಥಳಕ್ಕೆ ಬೇಟಿ ನೀಡಿ ಅಲ್ಲಿ ಚಾಸಾ-10 ರವರ ಸಮಕ್ಷಮದಲ್ಲಿ ಒಂದು ಪಂಚನಾಮೆಯನ್ನು ಮಾಡಿಸಿರುತ್ತೇವೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.**6** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಒಂದು ಕಚ್ಚಾ ನಕಾಶೆಯನ್ನು ಬಿಡಿಸಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.**7** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಒಂದು ಛಾಯಾಚಿತ್ರವನ್ನು ತೆಗೆದಿದ್ದು ಅದನ್ನು ನಿ.ಪಿ.**8** ಎಂದು ಗುರುತಿಸಲಾಯಿತು.

7) ನಂತರ ಅದೇ ದಿನ ಅಪಘಾತಕ್ಕೆ ಒಳಗಾದ ಎರಡೂ ವಾಹನಗಳ ಅಂದರೆ ಕೆ.ಎಸ್.ಆರ್.ಟಿ.ಸಿ. ಬಸ್ಸ ಹಾಗೂ ದ್ವಿಚಕ್ರ ವಾಹನದ ಜಪ್ತು ಪಂಚನಾಮೆಯನ್ನು ನನ್ನ ಹಾಗೂ ಚಾಸಾ-10 ಮತ್ತು ಚಾಸಾ-11 ರವರ ಸಮಕ್ಷಮದಲ್ಲಿ ಮಾಡಿದ್ದು, ಸದರಿ ಜಪ್ತು ಪಂಚನಾಮೆಯನ್ನು ನಿ.ಪಿ.**9** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ 03 ಛಾಯಾಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.**10**

ರಿಂದ ನಿ.ಪಿ.**12** ಎಂದು ಗುರುತಿಸಲಾಯಿತು. ನಿಪಿ-10 ರಲ್ಲಿ ನಾನು, ಚಾಸಾ-10 ಮತ್ತು ಚಾಸಾ-11 ಇರುತ್ತೇವೆ.

*(*ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ**,** ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ**,** ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು*.)*

ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -

1) ಈ ಮೇಲೆ ಹೇಳಿದ ಅಪಘಾತವು ಬಜಾಜ ಡಿಸ್ಕವರ ದ್ವಿಚಕ್ರ ವಾಹನ ಸಂಖ್ಯೆ ಕೆಎ 63 ಹೆಚ್ 8798 ಮತ್ತು ಆರೋಪಿತನು ಚಲಾಯಿಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸ ಸಂಖೆ ಕೆಎ 26 ಎಫ್ 877 ನೇದ್ದರ ನಡುವೆ ಅಪಘಾತವಾಗಿದ್ದು, ಸಂಜೆ ಸುಮಾರು 06-15 ಗಂಟೆಗೆ ನಾನು ನನ್ನ ಮನೆಯಲ್ಲಿದ್ದಾಗ ಅಪಘಾತವಾದ ಬಗ್ಗೆ ನನಗೆ ದೂರವಾಣಿ ಮೂಲಕ ಮಾಹಿತಿ ಬಂದಿರುತ್ತದೆ ಎಂದರೆ ಸರಿ.

2) ಘಟನಾ ಸ್ಥಳದ ಪಂಚನಾಮೆ ನಿಪಿ-6 ನ್ನು ನನ್ನ, ಚಾಸಾ-10 ಮತ್ತು ಚಾಸಾ-11 ರವರ ಸಮಕ್ಷಮ ಹಾಗೂ ನಿರ್ದೇಶನದ ಮೇರೆಗೆ ಮಾಡಲಾಗಿರುತ್ತದೆ ಎಂದರೆ ಸರಿ. ದಿನಾಂಕ 15-01-2020 ರಂದು ಆರೋಪಿ ಚಾಲಕನ ಹೆಸರು ತಿಳಿದುಕೊಂಡು ನನ್ನ ಮರುಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

*ಪಾಟೀಸವಾಲು ಆರೋಪಿ ಪರ ಃ ಶ್ರೀ ಎಂ ಎಸ್ ಹೆಚ್ ವಕೀಲರಿಂದ ಃ -*

1) ಮೃತರು ನನ್ನ ಗೆಳೆಯರಾಗಬೇಕು ಎಂದರೆ ಸರಿ. ಮೃತ ಕುಟುಂಬದವರು ವಿಮೆ ಪರಿಹಾರ ಕೇಳಿ ಪ್ರಕರಣವನ್ನು ಹೂಡಿರುತ್ತೇವೆ ಎಂದರೆ ಸರಿ.

2) ಠಾಣೆಗೆ ಸುಮಾರು ಸಂಜೆ 07-00 ಗಂಟೆಗೆ ಹೋಗಿದ್ದು ಅಲ್ಲಿ ಸುಮಾರು 02 ಗಂಟೆಗಳ ಕಾಲ ಇದ್ದೆವು. ನಿಪಿ-1 ನ್ನು ಯಾರು ಬರೆದಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ನಿಪಿ-1 ನ್ನು ಬರೆಯಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ.

3) ಅಪಘಾತ ಸ್ಥಳವು ಗದಗ ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ ಇರುತ್ತದೆ ಎಂದರೆ ಸರಿ. ಅಲ್ಲಿ ಸಾಕಷ್ಟು ವಾಹನಗಳ ಓಡಾಟ ಇದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ರಾಷ್ಟ್ರೀಯ

ಹೆದ್ದಾರಿಯ ಕಾಮಗಾರಿ ಚಾಲ್ತಿಯಲ್ಲಿ ಇದ್ದು ಅಲ್ಲಲ್ಲಿ ಕಾಮಗಾರಿಗೆ ಸಂಬಂದ ಪಟ್ಟಂತೆ ಖಡಿ ಮತ್ತು ಕಲ್ಲುಗಳು ಮತ್ತು ಸಿಮೇಂಟ ಸಂಗ್ರಹ ಮಾಡಿ ಇಟ್ಟಿದ್ದರು ಎಂದರೆ ಸರಿ.

4) ಸದರಿ ರಸ್ತೆ ಕಾಮಗಾರಿ ಪ್ರಯುಕ್ತ ಗದಗ ಹುಬ್ಬಳ್ಳಿ ಮಾರ್ಗದಲ್ಲಿ ಕೆಲಸ ನಡೆಯುತ್ತಿದ್ದ ಭಾಗದಲ್ಲಿ ಮಾತ್ರ ವಾಹನ ಸಂಚಾರವನ್ನು ಸ್ಥಗಿತಗೊಳಿಸಿರುತ್ತಾರೆ ಎಂದರೆ ಸರಿ. ಸ್ಥಗಿತಗೊಳಿಸಿದ ಭಾಗದ ವಿರುದ್ಧ ದಿಕ್ಕಿನಲ್ಲಿ ಏಕಸಂಚಾರ ಮಾಡಿದ್ದು, ನಂತರದಲ್ಲಿ ಸಣ್ಣ ಭಾಗವನ್ನು ವಾಹನ ಸಂಚಾರಕ್ಕಾಗಿ ತೆರವುಗೊಳಿಸಲಾಗಿರುತ್ತದೆ ಎಂದರೆ ಸರಿ.

5) ಸದರಿ ಕಾಮಗಾರಿ ನಡೆಯುತ್ತಿದ್ದ ಕಾರಣ ಘಟನೆ ನಡೆದ ಸ್ಥಳದಲ್ಲಿ ವಾಹನಗಳು ಏಕಸಂಚಾರ ಮಾಡುತ್ತಿದ್ದವು ಎಂದರೆ ಸರಿ. ಸದರಿ ಕಾರಣ ಬಹಳಷ್ಟು ವಾಹನಗಳ ಓಡಾಟ ಇತ್ತು ಅಂದರೆ ಸರಿಯಲ್ಲ.

6) ಘಟನಾ ಸ್ಥಳದಿಂದ ಪಶ್ಚಿಮ ದಿಕ್ಕಿಗೆ ಸವಳಹಳ್ಳ ಸೇತುವೆ ಇದೆ ಎಂದರೆ ಸರಿ. ಅದು ಸುಮಾರು 200 ಮೀಟರ ಅಂತರದಲ್ಲಿ ಇದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 500 ಮೀಟರ ಅಂತರದಲ್ಲಿದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದಿಂದ ಉತ್ತರ ದಿಕ್ಕಿಗೆ 200 ಮೀಟರ ಅಂತರದಲ್ಲಿ ಒಂದು ರೈಲ್ವೆ ಸೇತುವೆ ಇದೆ ಎಂದರೆ ಸರಿ. ಸದರಿ ರೈಲ್ವೆ ಸೇತುವೆಯ ಕೆಳಗಡೆ ಕೊಂಡಿಕೊಪ್ಪ ಗ್ರಾಮದಿಂದ ಬರುವ ಹೆದ್ದಾರಿ ಇರುತ್ತದೆ ಎಂದರೆ ಸರಿ.

7) ಮೃತರು ಕೂಲಿಕೆಲಸ ಹಾಗೂ ಗೌಂಡಿ ಕೆಲಸ ಮಾಡುತ್ತಿದ್ದರು. ಮೃತರು ಸಾಮಾನ್ಯವಾಗಿ ಸುತ್ತಮೂತ್ತಲಿನ ಹಳ್ಳಿಗಳಲ್ಲಿ ಕಟ್ಟಡ ನಿರ್ಮಾಣ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಮೃತರು ಕೊಂಡಿಕೊಪ್ಪ ಗ್ರಾಮದ ಹೊಲದಲ್ಲಿರುವ ಸೇತುವೆ ನಿರ್ಮಾಣ ಕಾಮಗಾರಿಗೆ ಹೋಗಿದ್ದರು ಅಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ದ್ವಿಚಕ್ರ ವಾಹನದಲ್ಲಿ 3 ಜನರು ಒಟ್ಟಿಗೆ ಬರುತ್ತಿದ್ದರು ಎಂದರೆ ಸರಿ. ಸದರಿ ಕಾರಣ ವಾಹನ ಚಲಾಯಿಸುತ್ತಿದ್ದವನು ಅತೀ ವೇಗದಿಂದ ಕೊಂಡಿಕೊಪ್ಪ ಗ್ರಾಮದ ರಸ್ತೆಯಿಂದ ಮುಖ್ಯ ರಸ್ತೆಗೆ ಬಂದು ಬಲಬದಿಗೆ ಅಲಕ್ಷತನದಿಂದ ತಿರುಗಿಸಿ ಸಮತೋಲನ ತಪ್ಪಿ ಬಸ್ಸಿಗೆ ಬಂದು ಗುದ್ದಿರುತ್ತಾರೆ ಅಂದರೆ ಸರಿಯಲ್ಲ. ಸದರಿ ವಿಷಯ ನನಗೆ ತಿಳಿದಿದ್ದರು ಸಹ ನಾನು ಸುಳ್ಳು ಮಾಹಿತಿಯ ಮೇರೆಗೆ ದೂರನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

8) ಅಪಘಾತ ಸಮಯದಲ್ಲಿ ಆರೋಪಿತನು ಜಾಗೃತೆಯಿಂದ ಚಲಾಯಿಸುತ್ತಿದ್ದು ಏಕಾಏಕಿ ಬಂದ ದ್ವಿಚಕ್ರ ವಾಹನವನ್ನು ತಪ್ಪಿಸಲು ತನ್ನ ಬಸ್ಸಿನ ಬ್ರೇಕನ್ನು ಹಾಕಿ ನಿಲ್ಲಿಸಲು ಪ್ರಯತ್ನ ಪಟ್ಟರು ಸಹ ಅಪಘಾತ ಮೃತರ ತಪ್ಪಿನಿಂದ ಆಗಿರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ-8 ನ್ನು ತೋರಿಸಿ ಅದರಲ್ಲಿ ಬಸ್ಸಿನ ಚಕ್ರದ ಅಚ್ಚು (ಟೈಯರ ಮಾರ್ಕ) ಇದ್ದು ಅದು ಆರೋಪಿತನು ಬ್ರೇಕ್ ಹೊಡೆದ ಕಾರಣ ಆಗಿರುತ್ತದೆ ಎಂದರೆ ಸರಿ. ಅಪಘಾತವನ್ನು ನಾನು ಪ್ರತ್ಯಕ್ಷ ಕಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಮಾಹಿತಿಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

9) ಘಟನಾ ಸ್ಥಳದ ಪಂಚನಾಮೆಯನ್ನು ಬರೆಯಲು ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ-7 ನ್ನು ಯಾರು ಬಿಡಿಸಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಸದರಿ ಅಪಘಾತ ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಮತ್ತು ಆತನ ವಾಹನದಲ್ಲಿ ಸವಾರರು ಆಗಿದ್ದವರ ತಪ್ಪಿನಿಂದ ಆಗಿದ್ದರು ಸಹ ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿ ಚಲಾಯಿಸುತ್ತಿದ್ದ ಬಸ್ಸ ವಾಹನವು ಅತೀ ವೇಗದಿಂದ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚಾಲಕನ ತಪ್ಪಿನಿಂದ ಅಪಘಾತವಾಗದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**
**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**